**ದಿನಾಂಕ 17.06.2025 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಪಾಟೀಸವಾಲುಃ ಶ್ರೀ ಹೆಚ್.ಡಬ್ಲ್ಯೂ.ಎ. ವಕೀಲರಿಂದಃ**

1. ನನಗೆ 55 ವರ್ಷ ವಯಸ್ಸು. ನಾನು ಜ್ಯೋತಿನಗರ ಶಿರಾದ ನಿವಾಸಿ. ವಾದಿಯ ತಾಯಿ ಗಂಗಮ್ಮ ತೀರಿಕೊಂಡು ಸುಮಾರು ವರ್ಷಗಳು ಆಗಿವೆ, ನಿಖರವಾಗಿ ನನಗೆ ಗೊತ್ತಿಲ್ಲ. ವಾದಿಯ ತಾಯಿ ಬದುಕಿರುವ ಕಾಲದಲ್ಲಿ ದಾವಾ ಜಮೀನು ಖರೀದಿಸಿದ ನಂತರ ಏನೆಲ್ಲಾ ವ್ಯವಹಾರ ಮಾಡಿದ್ದಾರೆ ಎಂದು ನನಗೆ ಮಾಹಿತಿ ಇಲ್ಲ. ವಾದಿಯ ತಾಯಿ ದಾವಾ ಜಮೀನನ್ನು ಯಾವಾಗ ಮಾರಾಟ ಮಾಡಿದ್ದಾರೆ ಎಂದರೆ ಮಾರಾಟ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ದಾವಾ ಜಮೀನಿನ ಪಹಣಿಗಳನ್ನು ನಾನು ನೋಡಿರುವುದಿಲ್ಲ. 1981 ನೇ ಸಾಲಿನ ನಂತರ ಪಹಣಿಯಲ್ಲಿ ಯಾರು ಯಾರ ಹೆಸರು ಇದೆ ಎಂದು ನಾನು ನೋಡಿರುವುದಿಲ್ಲ. ವಾದಿಯ ತಾಯಿ ಜೀವಂತ ಇರುವಾಗ ನಾನು ಜಮೀನಿನಲ್ಲಿ ಕೆಲಸಕ್ಕೆ ಹೋಗುತ್ತಿದ್ದೆನು. 1981 ನೇ ಸಾಲಿನಲ್ಲಿ ಸದರಿ ಜಮೀನನ್ನು ವಾದಿಯ ತಾಯಿ ಗಂಗಮ್ಮನವರು ಮಾರಾಟ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ.
2. ವಾದಿಗಳಿಗೆ ಸಹಾಯ ಮಾಡುವ ಸಲುವಾಗಿ ಮಾರಾಟ ಮಾಡಿರುವ ಬಗ್ಗೆ ಗೊತ್ತಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1981 ನೇ ಸಾಲಿನ ನಂತರ ಎಂದಿಗೂ ವಾದಿಯ ತಾಯಿ ಮತ್ತು ವಾದಿಗಳು ದಾವಾ ಜಮೀನಿನಲ್ಲಿ ಸ್ವಾಧೀನದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. 1981 ನೇ ಸಾಲಿನ ನಂತರ ನಾನು ಎಂದಿಗೂ ದಾವಾ ಜಮೀನಿನಲ್ಲಿ ಉಳುಮೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್ ಗೊಳಿಸಿ ದಾಖಲಿಸಿ ಪ್ರಿಂಟ್ ತೆಗೆಯಲಾಯಿತು)

**ಓದಿ ಹೇಳಿ ಕೇಳಿ ಸರಿ ಇದೆ,**

**ಹಿರಿಯ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ, ಶಿರಾ.**